ಸೂಕ್ತಿ ಮಂಜರಿ

ಕ। ಪು। ಸೀತಾರಾಮ ಕೆದಿಲಾಯ
ಶಿಶಿಲ, ಬೆಳ್ತಂಗಡಿ ತಾಲೂಕು, ದ. ಕ.

1970

ಬೆಲೆ: ರೂ. [illegible]=೫೦ ಪೈಸೆ

ಸೂಕ್ತಿಮಂಜರಿ

ಕ। ಪು। ಸೀತಾರಾಮು ಕೆದಿಲಾಯ

ಅರ್ಪಣೆ

ವೈ। ವಾ। ಲಕ್ಷ್ಮೀ ಅಮ್ಮನವರಿಗೆ

ಜನನಿಯೆ ಪೆತ್ತೆನ್ನಂ ನೀ ।
ಮೆನಗೆರ್ದೆವಾಲುಣಿಸಿ ಸಲಹಿದಿರ್ ಮೆಯ್ಗ್ಗಱಿದಿರ್ ॥
ವಿನಯದೆ ನಿಮ್ಮಮಲಾತ್ಮಕೆ ।
ನೆನಪಿನ ಕಿಱುಗಾಣ್ಕೆಯೊವೆನೆನ್ನೀ ಕೃತಿಯಂ ॥

—"ಸೀತಾರಾಮು"

ಮುನ್ನುಡಿ

ಈ "ಸೂಕ್ತಿ ಮಂಜರಿ"ಯು ಪ್ರತಿ ಪದ್ಯವೂ ಸ್ವಯಂ ಪೂರ್ಣವಾಗಿದೆ. ಒಂದು ಪದ್ಯಕ್ಕೂ ಇನ್ನೊಂದು ಪದ್ಯಕ್ಕೂ ಸಂಬಂಧವಿಲ್ಲ. ವಾಚಕರು ಈ ಕೃತಿಯ ದೋಷಗಳನ್ನು ಎಣಿಸದೆ ಉತ್ತಮ ವಿಚಾರಗಳನ್ನು ಮಾತ್ರ ಪರಿಗಣಿಸಬೇಕೆಂದು ವಿಜ್ಞಾಪಿಸುತ್ತೇನೆ.

ಇದರ ಹಸ್ತಪ್ರತಿಯನ್ನು ಓದಿ ಸೂಕ್ತ ಸಲಹೆಗಳನ್ನಿತ್ತ ತೆಕ್ಕುಂಜ ಗೋಪಾಲಕೃಷ್ಣ ಭಟ್, ಎಂ. ಎ., ಟಿ. ಕೇಶವ ಭಟ್, ಎಂ. ಎ., ಕೊಳಂಬೆ ಪುಟ್ಟಣ್ಣ ಗೌಡ, ವಿದ್ವಾನ್ — ಅವರಿಗೆ ಚಿರಋಣಿಯಾಗಿರುವೆನು.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿದ ಆದರ್ಶ ಪ್ರೆಸ್, ಪುತ್ತೂರು - ಇವರಿಗೆ ಕೃತಜ್ಞತೆಗಳು.

ಶಿಶಿಲ
೨೬-೧-೧೯೭೦ } ಕ. ಪು. ಸೀತಾರಾಮ ಕೆದಿಲಾಯ

ಸೂಕ್ತಿ ಮಂಜರಿ

ಶ್ರೀ ವಿಶ್ವೇಶಂ ಮಹಿಮಂ |
ಪಾವನಲೀಲಂ ಪ್ರಪಂಚ ಮೂಲಾಧಾರಂ ||
ಭಾವಾಗಮ್ಯವಿಚಾರಂ |
ದೇವಂ ಪಾಲಿಸುಗೆ ಸರ್ವ ಜನಮಂ ಸತತಂ || ೧ ||

ಚಾರುಪದಂ ಸರಸಾಲಂ |
ಕಾರಂ ಸದ್ಭಾವಮಮಲವರ್ಣಂ ಸುಗುಣಂ ||
ಸಾರ ಸುಲಕ್ಷಣಮೊಪ್ಪುವ |
ಭಾರತಿ ಸನ್ಮತಿಯು ನಮಗೆ ನೀಡುಗೆ ನಿರತಂ || ೨ ||

ರವಿ ಕಾಣದ ವಿಷಯಂಗಳ |
ಕವಿಗಳ್ ಸುಜ್ಞಾನದಿಂದೆ ಪರಿಕಿಸಿ ಬರೆದರ್ ||
ನವ ವಿಷಯಮನೆಂತೆಂಬೆಂ |
ಸುವಿಚಾರವ ಪೂರ್ವಕೃತಿಯನೀಕ್ಷಿಸಿ ಪೇಳ್ವೆಂ || ೩ ||

ಕಂದಂ ತೊದಲ್ವ ವಚನ |
ಕ್ಕಂದಕೆ ಮನವಿರಿಸಿ ಕುಂದನೆಣಿಸದೆರಸದು ||
ಕ್ಕಂದವ ಭಾವಿಸುವಂತೀ |
ಕಂದದೆ ಸೂಚಿಸುವ ಸೂಕ್ತಿಯೆಣಿಸುಗೆ ಗುಣಿಗಳ್ || ೪ ||

* * *

ಅಕ್ಷರಮಂ ಕಲಿಯದ ನರ |
ನಕ್ಷಿದ್ವಯಮಿರ್ದುಮಂಧಕಂ ಕರ್ಣಯುಗಂ ||
ಲಕ್ಷಣಕಿರ್ದುಂ ಬಧಿರಂ |
ಶಿಕ್ಷಿತ ವಿದ್ಯಾಪ್ರವೀಣನಿಳೆಯೊಳ್ ಮಾನ್ಯಂ ||೧||

ಕಿವಿಯೊಳ್ ನುಡಿಯದೆ ರಸನೆಯ |
ಸವಿಗಮರದೆ ಕಣ್ಗೆ ಚೆಲ್ವಿರದೆ ಮೂಗಿಗೆ ಸೌ |
ಸವಮೊಯಡೆ ಮೆಯ್ ಮುಟ್ಟದೆ |
ನವರಸಮಂ ಬೀಱಿ ಬರೆಪಮೊದೆ*ರ್ವುಗುತಿಕರ್ಂ ||೨||

ಸ್ವರವಿಸ್ತರಮಂ ತೋಱುವ |
ಸರಿಗೆಗಳಿಂದೆಸೆವ ವಿಮಲ ವೀಣೆಯ ತೆಱದಿಂ ||
ಸರಸಾರ್ಥವ ಬಗೆವುಗಿಸುವ |
ಪರಮಾಕ್ಷರಯುಕ್ತವಾಕ್ಯದಿಂ ಕೃತಿ ಮೆಱೆಗುಂ ||೩||

ಅಲರಿನಿವಣ್ಣಿಲ್ಲದ ಸಸಿ |
ಪೊಲಲಂಕೃತ ರಸ[illegible]ಹೀನ ಕವನಂ ವಿಫಲಂ ||
ಲಲಿತ ಸುಮ ಫಲದ ತರುವೊಲ್ |
ವಿಲಸದಲಂಕೃತಿಯ ಸರಸ ಕಾವ್ಯಂ ಸೇವ್ಯಂ ||೪||

ಮೊಸರಂ ಕಡಗೋಲಿಂ ಮಂ |
ಥಿಸೆ ನವನೀತಂ ರಸಾಲಮಂ ಮರ್ದಿಸೆ ಸ ||
ದ್ರಸಧಾರೆಯೊಗೆವ ತೆಱದಿಂ |
ರಸವದ್ಘನಕೃತಿಯನೋದೆ ತತ್ವಂ ಲಭಿಕುಂ ||೫||

ಒರ್ವಂ ಬೆಳಗಿದ ದೀವಿಗೆ |
ಶರ್ವರಿಯೊಳ್ ತಮವ ಕಳೆದು ಸುತ್ತಲ್ ಬೆಳಗಂ ||
ಸರ್ವರ್ಗಂ ನೀಡುವ ವೋ |
ಲುರ್ವಿಯೊಳೊರ್ವನ ವಿಶುದ್ಧ ಕೃತಿ ತಿಳಿವೀಗುಂ ||೬|

ವಿಸ್ತರವೆನಿಸುವ ಜಗದ ಸ ।
ವುಸ್ತ ವಿಚಾರವ ನರಂಗೆ ಭಾವಿಸಲೆಲ್ಲಾ ॥
ವಸ್ತುವ ನೋಡಲಸಾಧ್ಯಂ ।
ಪುಸ್ತಕವಂ ನೋಡೆ ಸುಲಭದಿಂದಱಿವಕ್ಕುಂ ॥ ೭ ॥

ಎಸೆವ ಸುರೇಖಾವರ್ಣ ।
ಪ್ರಸರದ ಚಿತ್ರಂ ಸುರಾಗ ತಾಳದ ಗೀತಂ ॥
ಲಸದರ್ಥ ಪದದ ಕಾವ್ಯಂ ।
ರಸಭೋಜನವುಣಿಸಿ ಜನದ ಮನಮಂ ತಣಿಕುಂ ॥ ೮ ॥

ಇಳೆಯೊಳ್ ಬಿತ್ತದೊಡಂ ಸಲೆ ।
ಮೊಳೆವುದು ಫುಲ್ ಬಿತ್ತಿ ಬೆಳೆಯಿಸದೆ ಬೆಳೆಯದು ಕೆಯ್ ॥
ಪೊಳೆವುದನೀತಿ ವಿಚಾರಂ ।
ತಿಳಿಯದು ಯತ್ನಿಸದೆ ವಿಮಲ ವಿದ್ಯಾಜ್ಞಾನಂ ॥ ೯ ॥

ಉದ್ಯೋಗಂ ಗೆಯ್ವೊಡೆ ನಿರ ।
ವದ್ಯ ಸುತತ್ವದ ವಿಚಾರವಱಿವೊಡೆ ಜಗದೊಳ್ ॥
ಸದ್ಯಶವಂ ಪ್ರಕಟಿಸುವೊಡೆ ।
ವಿದ್ಯಾನುಭವಂ ನರಂಗೆ ಸಾಧನಮಕ್ಕುಂ ॥ ೧೦ ॥

ಎಡವಿದೊಡಂ ಮೆಯ್ ನೋವಂ ।
ಬಡೆದೊಡಮೆಳಮಕ್ಕಳೆಣಿಸದೆಳವೆಯೊಳೊಲವಿಂ ॥
ನಡೆಯಲ್ಕಡಿಯಿಡುವಂದದೆ ।
ಬಿಡದೆ ಸುವಿದ್ಯೆಗಳ ತಿಳಿವುದತಿ ಸಾಧನೆಯೊಳ್ ॥ ೧೧ ॥

ಪೊಡೆವೊಡೆ ಗುಱಿಯಂ ಬಿಲ್ಲಂ ।
ಪಿಡಿಯುತೆ ಕೂರ್ಗಣೆಯು ಪೊಡಲಭ್ಯಸಿಸುವವೊಲ್ ॥
ಪಡೆವೊಡೆ ವಿದ್ಯಾಸಾರವ ।
ನುಡಿವಕ್ಷರವೋದಿ ಬರೆಯೆ ಕಲ್ವುದವಶ್ಯಂ ॥ ೧೨ ॥

ಅಸಮಾನೋಜ್ವಲ ಕಾಂತಿ |
ಪ್ರಸಾರದಿಂ ರತ್ನಮೆಸೆವವೋಲ್ ಪರಿಮಳದಿಂ ||
ಕುಸುಮಂ ಪರಿಶೋಭಿಪವೊಲ್ |
ವಸುಧೆಯೊಳುತ್ತುಂಗ ವಿದ್ಯೆಯಿಂ ನರನೆಸೆವಂ || ೧೩ ||

ಗಿರಿಯೊಳ್ ಹಿಮಾದ್ರಿಯಧಿಕಂ |
ತರಂಗಿಣೀಗಣದೆ ಗಂಗೆಯನುಪಮ ತೀರ್ಥಂ ||
ತರುವೊಳ್ ಮಳಯಜಮಮಳಂ |
ನರರೊಳ್ ವಿದ್ಯಾವಿವೇಕಭರಿತಂ ಶ್ರೇಷ್ಠಂ || ೧೪ ||

ಪ್ರದ್ಯೋತರುಚಿಗೆ ಕಿಱುಸೊಡ |
ರುದ್ಯತ್ಪರ್ವತಕೆ ವೊಱಡಿ ವಾರ್ಧಿಗೆ ಪಳ್ಳಂ ||
ಹೃದ್ಯ ರಸಾಲಕೆ ಸೀರ್ಪುಲ್ |
ವಿದ್ಯಾಸುಜ್ಞಾನನಿಧಿಗೆ ಮೂಢಂ ಸರಿಯೇ? || ೧೫ ||

ಅರವಿಂದ ಪುಷ್ಪವಿಲ್ಲದ |
ಸರಸಿ ವಿರಾಜಿಪುದೆ? ರಾತ್ರಿಯೊಳ್ ತಾರಾಧೀ- ||
ಶ್ವರನಿಲ್ಲದೆ ನಭಮೆಸೆವುದೆ? |
ಪರಿಣತ ಬುಧರಿಲ್ಲದಲ್ಪ ಸಭೆ ಶೋಭಿಪುದೇ? || ೧೬ ||

ವೃಷ್ಟಿಯ ಜಲಮಂ ಚಾದಗೆ |
ತುಷ್ಟಿಯೊಳುಣ್ಬಂತೆ ಚಂದ್ರರುಚಿಯ ಚಕೋರಂ ||
ದೃಷ್ಟಿಸಿ ಪರಿತೋಷಿಪವೋ |
ಲಿಷ್ಟಕಲಾವಿಷಯ ರಸವ ರಸಿಕರ್ ಪಡೆವರ್ || ೧೭ ||

ಅಳಿಯಮಳ ರುತಿಯಲಂಪುಂ |
ಗಿಳಿಯೋದಿನ ನುಣ್ಪುಮುಲಿವ ಕಳಕಂಠನ ಸ ||
ತ್ಸ್ವರವದ ಸೊಂಪುಮೊದವಿದ |
ಕಳಾವಿಶಾರದನ ಗೇಯದಿಂಪು ಮನೋಜ್ಞಂ || ೧೮ ||

ಉಡುತತಿಯೆನಿತೋ ತೋಱದೆ |
ಜಡದದ ಪಿಂತಿರ್ಕುಮಮಲ ಮಣಿಗಣಮೆನಿತೋ ||
ಪೊಡವಿಯ ಗರ್ಭದೊಳಿರ್ಕುಂ |
ಕಡು ಜಾಣರ್ ಕಾಣದಿರ್ಪರೆನಿಬರೊ ಧರೆಯೊಳ್ || ೧೯ ||

ಶತಪತ್ರೋತ್ಪಲ ಸಂಶೋ |
ಭಿತ ಸರಸಿಯ ಮಲಿನ ಪಂಕಮಂ ವರ ರಾಕಾ ||
ಸಿತಕರ ಬಿಂಬದ ಕಱೆಯುಂ |
ಪ್ರತಿಭಾಶಾಲಿಯ ಕಳಂಕಮಂ ನರರೆಣಿಸರ್ || ೨೦ ||

ತುಹಿನಕರಂ ಬಿಸಿಯಾಗಂ |
ಮಿಹಿರಂ ಕರ್ಪೆನಿಸನಾಶುಗಂ ಚಲಿಸದಿರಂ ||
ದಹನಂ ಶೀತಳನಾಗಂ |
ಮಹಿಮಾವಂತಂ ಪ್ರಭಾವ ಗುಣಮಂ ತೊಱೆಯಂ || ೨೧ ||

ಧರೆ ಗುದ್ದಲಿಯಿಂ ಮರ್ದಿಪ |
ನರರಂ ದಯೆಯಿಂದಮೆತ್ತಿ ಸಲಪುವ ತೆಱದೊಳ್ ||
ಪರಿಭವಿಸಿ ತನ್ನ ನೋಯಿಪ |
ವಿರೋಧಿ ಜನಮಂ ಮಹಾತ್ಮನೊಲವಿಂ ಕ್ಷಮಿಪಂ || ೨೨ ||

ಕರಿ ಘನಬಲದಿಂ ಕೀರಂ |
ಸರಸ ವಚನದಿಂದೆ ಧೇನುವತಿಶಯ ಪಯದಿಂ ||
ತುರಗಂ ವೇಗದ ನಡೆಯಿಂ |
ನರನಮಲಜ್ಞಾನದಿಂದೆ ಪಡೆಗುಂ ಯಶಮಂ || ೨೩ ||

ಪರರಂ ಪರಿಕಿಸಿ ಶುನಕದ |
ಪರಿಯೊಳ್ ಕರಿ ಬಗುಳದಾತ್ಮಘೋಷದ ತೆಱದೊಳ್ ||
ಪರಪುಷ್ಟಂ ನೆಱೆ ಜಱುಚದು |
ಪರಮ ವಿವೇಕನಿಧಿ ಮೂಢನಂದದೆ ಗಳಪಂ || ೨೪ ||

ರಾಕಾಹಿಮಕರ ಕಾಂತಿಯು |
ಕಾಕಂ ಪೆಱದೊಡಮುಡಂಗದರ್ಕಪ್ರಭೆಯಂ ||
ಘೂಕಂ ಜಱಿದೊಡಮಾಱದು |
ಲೋಕದೆ ಗುಣಿಯನವಿವೇಕಿ ಬಯ್ದೊಡಮಳ್ಕಂ || ೨೫ ||

ವಿಳಸಿತ ತತ್ವ ವಿಚಾರಂ |
ಗಳ ಸಾರಮನಱಿಯದೋದುತಿರ್ದೊಡೆ ಫಲಮೇಂ? ||
ತಿಳಿಯದೆ ನಿಜವಚನಾರ್ಥವ |
ಗಿಳಿ ತಪ್ಪದೆ ನುಡಿವುದಲ್ತೆ ಕಲ್ತ ನುಡಿಯಂ? || ೨೬ ||

ಅಂಧಂ ಚಿತ್ರ ಕಲಾಕೃತಿ |
ಯಂದವ ಮೂಕಂ ಸುಗೀತ ರಾಗವ ಪೆಱವಂ ||
ಸುಂದರ ನೃತ್ಯ ವಿಚಾರವ |
ಮಂದಮತಿಯಮೋಘ ನೀತಿಯಂ ಬೋಧಿಸುವೋ? || ೨೭ ||

ಕತ್ತುರಿಯ ಕಱಿತ್ತ ಬೆನ್ನೊಳ್ |
ಪೊತ್ತೊಡೆ ಪರಿಮಳವ ತಿಳಿಯುದಲ*ರ್ಗಳ ಕಂಪಂ ||
ನೆತ್ತಿಯ ಪೇನ್ ತಾನಱಿಯದು |
ಸತ್ತತ್ವದ ಪುರುಳನಜ್ಞನೋದಿಯುಮಱಿಯಂ || ೨೮ ||

ಕುಱಿ ಕರ್ಪಸುಱಿದು ಸೋಗೆಯ |
ಮುಱಿದುಣ್ಗುಂ ಜಿಗುಳೆ ದನದ ಕೆಚ್ಚಲ ಪಾಲಂ ||
ತೊಱಿದು ರುಧಿರವಂ ಭುಜಿಸುಗು |
ಮಱಸದೆ ಸದ್ರಸಮನಜ್ಞನಾಯ್ವಂ ಕಸವಂ || ೨೯ ||

ಜಗಡೆಯು ಪರಿಯೊಳ್ ಸಾರವ |
ಪರಿವರ್ಜಿಸಿ ಮೂಢಮತಿಯುಸಾರಮನಾಯ್ವಂ ||
ಕೆರಸೆಯು ತೆಱದಿಂ ಶೋಧಿಸಿ |
ಸರಿಯಿಸಿ ದೋಷವ ವಿವೇಕಿ ಪುರುಳನೆ ಪಡೆವಂ || ೩೦ ||

ವನದಿಂ ಪರ ಚಂದನಮಂ ।
ವನಧಿಯು ತಳದಿಂದೆ ಮೌಕ್ತಿಕವ ಗಿರಿಯೊಡೆಯಿಂ ॥
ಘನ ಮಾಣಿಕ್ಯವ ತೆಗೆವರ್ ।
ಸುನೀತಿ ಗುಣಯುತನನಾದರಿಸುವರ್ ಸಕಲರ್ ॥ ೩೧ ॥

ಪರಿಮಳದಿಂ ಮುರುಡೆನಿಸುವ ।
ಸಿರಿಕಂಡಮಿನಿದಿನೊರಂಟಿನಿಂಗೋಲ್ ಕಂಪಿಂ ॥
ಕರಿಯು ಮೃಗನಾಭಿಯೆಸೆಗುಂ ।
ಪರ ಮಾನ್ಯತೆ ರೂಪಿನಲ್ತು ಸುಗುಣದೆ ಬರ್ಕುಂ ॥ ೩೨ ॥

ಜಗದೊಳ್ ಗೋವಿನ ದುಗ್ಧಂ
ಮೃಗದಿಂ ಸಂಜನಿಪ ಮೃಗಮದಂ ಮಕ್ಷಿಕದಿಂ ॥
ದೊಗೆವ ಮಧು ಶುದ್ಧಮೆನಿಕುಂ ।
ಸುಗುಣಂ ಪುಟ್ಟಿನ ಕಳಂಕ ದೋಷವ ಕಳೆಗುಂ ॥ ೩೩ ॥

ಪಿರಿದಾಗಿರ್ಪಅತಿ ಸುಮನೋ ।
ಹರ ಮಾಣಿಕ್ಯಕೆಣೆಯಾಗದುನ್ನತವಂಶಂ ॥
ಸುರಸೇಕ್ಷುಗೆ ಸರಿಯಾಗದು ।
ತರಳಂ ಸದ್ಗುಣದೆ ಪಿರಿಯರಿಂ ಮೇಲೆನಿಕುಂ ॥ ೩೪ ॥

ವಿಕಸಿತ ಸೌರಭಯುತ ಸುಮ ।
ನಿಕರವ ನರರಾಯ್ದು ಸೂಡುವರ್ ದುರ್ಗಂಧ ॥
ಪ್ರಕಟ ಸುಮೌಘವ ಮುಡಿಯರ್ ॥
ಸಕಲರ್ ಗುಣನಿಧಿಯನೊಲ್ವರಧಮನ ಮೆಚ್ಚರ್ ॥ ೩೫ ॥

ಅಣೆಯಿಸಿ ಸಾಣೆಗೆ ಪಿಡಿದೊಡೆ ।
ಮಣಿ ಕಾಂತಿಯ ಪಡೆವುದಗ್ನಿಯೊಳ್ ಸುಟ್ಟೊಡೆ ಕುಂ॥
ದಣಮತ್ಯುಜ್ವಲಮಪ್ಪುದು ।
ಗುಣವಂತಂ ನೊಂದು ಬೆಂದೊಡುನ್ನತಿ ಪಡೆವಂ ॥ ೩೬ ॥

ಪರಿಮಳದ ಚಂದನಂ ಸುಮ |
ಧುರಮೆನಿಪದಿನಿದಿನ ಕರ್ಪು ಸೊಬಗಿರದತಿ ಸುಂ ||
ದರ ಕನಕಂ ಕಂಪೀಯದು |
ನರನೊರ್ವನೊಳಖಿಳ ಸುಗುಣಪೊಪ್ಪಿರದಿಳೆಯೊಳ್ || ೩೭ ||

ಗಿಳಿಯು ಪೊರೆವಂತೆ ಕರಟಂ |
ಗಳ ಸಲಪರ್ ಕರ್ವ ನಡುವ ತೆಜದೊಳ್ ಬಿದಿರಂ ||
ಬೆಳೆಯಿಸರಿಳೆಯೊಳ್ ಮನುಜರ್ |
ವಿಳಸದ್ಗುಣನಿಧಿಯನಲ್ಲದಲ್ಪನನೆಣಿಸರ್ || ೩೮ ||

ಇಂಗೋಲಂ ಪಲೆ ಪಿೞಿದೊಡೆ |
ಪಿಂಗದೆ ಮಧುರ ರಸಮಿೞಿಗುಮೊಡೆದೊಡೆ ಸಿಪ್ಪಂ ||
ತೆಂಗಾಯೊಳ್ ಪುರುಳೆಸೆಗುಂ
ತುಂಗಗುಣನೊರಂಟುಗಂಡೊಡಂ ಮೃದುವೆನಿಕುಂ || ೩೯ ||

ಮಲಿನತರ ವಸ್ತು ಸಹ ಕ |
ಶ್ಮಲ ಮಿಶ್ರಿತ ಜಲಮನೀಂಟಿ ಪಾದಪ ಲತೆಗಳ್ ||
ಫಲ ಸುಮಮಂ ತಳೆವಂದದೆ |
ಕಲಂಕಮಂ ನುಂಗಿ ಗುಣವ ತೋರ್ಪರ್ ಸುಜನರ್ || ೪೦ ||

ಪೊರೆಯುತೆ ಬೆಳೆಯಿಸುಪಂಗಂ |
ಪೊರೆಗೈತರ್ಪಂಗಮಿಕ್ಕಿ ಕಡಿದೊಡೆವಂಗಂ ||
ತರು ನೆೞಲಂ ಪರಪುವವೊಲ್ |
ಪರಿಭೇದಮನಿಡದೆ ಜನಪ ಗುಣಿಯಾದರಿಪಂ || ೪೧ ||

ಕರಿದೆನಿಪ ಕಜ್ಜಳಂ ಕೆ |
ತ್ತುರಿವೆಸರಾಂತಪುದೆ? ಬಿಳಿಯ ನೊರೆಯುಕ್ಕುವ ಕಳ್ ||
ವರ ಪಯನೆಂದೆನಿಸುವುದೇ? |
ಸ್ವರೂಪಮಂ ನೋಡಿ ಗುಣಮನೆಣಿಸಲಶಕ್ಯಂ || ೪೨ ||

ಶಿಲೆಯೊಳ್ ಬಿತ್ತಂಕುರಿಸದು ।
ನೆಲದೊಳ್ ಸಲೆ ಮೊಳೆತು ಬೀಜವಾಗುಂ ಫಲವಂ ॥
ಖಲನೊಳ್ ಬೋಧನೆ ನೆಲಸದು ।
ವಿಲಸದ್ಗುಣಯುತನ ಮನದೊಳೊಳ್ಪಡಿ ಫಲಿಕುಂ ॥ ೪೩ ॥

ಕುರುಡನ ಸಮ್ಮುಖದೊಳ್ ಸಿಂ ।
ಗರಿಸುತೆ ನರ್ತಿಸಿದ ತೆಱದೆ ಕಿವುಡನ ಕೆಲದೊಳ್ ॥
ವರಗೀತವ ನುಡಿದಂದದೆ ।
ದುರಹಂಕಾರಿಗೆ ಸುನೀತಿಯೊರೆವುದು ವಿಫಲಂ ॥ ೪೪ ॥

ಉರಗಕೆ ತನಿವಾಲೆಱೆದೊಡೆ ।
ಗರಳಮನಿಂಗಿಸದು ಬೇವನೈಕ್ಷವ ರಸದಿಂ ॥
ಪೊರೆದೊಡೆ ಕಯ್ಪುಯಮುಱಿಯದು ।
ದುರುಳಂಗೊಳ್ಪಿತನೆ ಬಗೆದೊಡವಗುಣಮುಱಿಯಂ ॥ ೪೫ ॥

ಉರಿವಗ್ನಿಗೆ ಕೆಡೆದುರಗವ ।
ಕರದಿಂಪಿಡಿದೆತ್ತಿ ಕಡಿಗುಮಿಱುಕಿದ ಪುಲಿಯಂ ॥
ಕರುಣದೆ ಸೆಱೆವಿಡೆ ತಱಿಗುಂ ।
ದುರಾತ್ಮರಂ ದಯದೆ ಕಾಯೆ ಕೇಡನೆ ಬಗೆವರ್ ॥ ೪೬ ॥

ಜಳನಿಧಿಯಾಳವ ವಸುಧಾ ।
ತಳ ಗರ್ಭವ ಪವನ ಪಥವ ಗಗನೋನ್ನತಿಯಂ ॥
ಜ್ವಳನಾಂಗವ ನೋಡಿದೊಡಂ ।
ಖಳನಂತರ್ಯವ ಪರರ್ಗೆ ತಿಳಿಯಲಸದಳಂ ॥ ೪೭ ॥

ಅಹಿಯೊಳವೊಕ್ಕಲೆದಾಡುವ ।
ಗೃಹದೊಳ್ ನೆಲಸುವುದು ಘೋರ ಮೃಗಮಿರ್ಪ ಮಹಾ॥
ಗಹನದ ಸನಿಯದೊಳಿರ್ಪುದು ।
ಕುಹಕಿಗಳೊಡಗೂಡಿ ಜೀವಿಪುದಪಾಯಕರಂ ॥ ೪೮ ॥

ಬಗೆವೊಡೆ ಕಳಕೀರದವೊಲ್ |
ಖಗಕುಲದೊಳ್ ಪರ್ದು ಯೋಗ್ಯವೇ? ಗೋವಿನವೊಲ್ ||
ಮೃಗದೊಳ್ ಪುಲಿಯುತ್ತಮವೇ?
ಸುಗುಣಿಯವೊಲ್ ಹಿಂಸಕಂ ಜನಪ್ರಿಯನಾಗಂ || ೪೯ ||

ನಳಿನಾವಳಿಯಿಂದೊಪ್ಪುವ |
ಕೊಳದೊಳ್ ಶೈವಾಲಮೊಸೆವ ಕೆಯ್ವೊಲನೊಳ್ ಪುಲ್ ||
ಬೆಳೆದೊಡನೆ ಪೆರ್ಚುವಂತಿರೆ |
ಇಳೆಯೊಳ್ ಗುಣವಂತರೆಡೆಯೊಳಧಮರ್ ಸೇರ್ವರ್ ||೫೦||

ಹರಿಣವ ತಱಿಗುಂ ಪೆರ್ಬುಲಿ |
ಮರಾಳಮಂ ವಧಿಸುಗುಂ ಬಕಂ ಶುಕ್ಕುಟಮಂ ||
ಪರಿಮರ್ದಿಸುಗುಂ ಗಿಡುಗಂ |
ದುರುಳರ್ಗಿರ್ಕುಂ ಸುಶೀಲರಿಂದಧಿಕಬಲಂ || ೫೧ ||

ಜಲಜಾಕರ ತಟದೆಡೆಯೊಳ್ |
ನಲಿದುಂ ಬಕಮಂಚೆಯಾಗದು ಪವನಮಲೆದುಂ ||
ಬಲಿಪುಷ್ಟಂ ಪಿಕಮಾಗದು |
ಖಲನುಜ್ವಲ ಸಭೆಯೊಳಿರ್ದುಮುತ್ತಮನಾಗಂ || ೫೨

ಪಿಕಶಿಶು ಕಾಗೆಯ ನೆಲೆಯೊಳ್ |
ನಿಕಟದೆ ಬರ್ದು*ಕಿದೊಡೆ ಕಿಡದು ಪೊನ್ ಲೋಹಕರಂ ||
ಡಕದೊಳಗಿರ್ದೊಡೆ ಮಸುಳದು |
ಶುಕವಿರ್ದು ನೀಚಾತ್ಮರೊಡನೆ ಸೇರ್ದೊಡೆ ನವೆಯಂ || ೫೩ ||

ಕಮಲಂ ಪಾವಸೆಯೊಡನಿರೆ |
ವಿಮಳಾಮೋದಮನೞಿಯದು ಮಳಯಜಮನ್ಯ ||
ದ್ರುಮದೊಡನಿರೆ ಕಂಪುೞಿಯದು |
ಸುಮತಿ ಕಳಂಕಿಗಳ ಬೞಿಯೊಳಿರೆ ಗುಣಮುೞಿಯಂ || ೫೪ ||

ಜಳಕಣಸಂಯೋಗದೆ ನಿ ।
ರ್ಮಳ ಮಧು ಪಾಳಕ್ಕುಮಾಮ್ಲ ಸಮ್ಮಿಶ್ರಣದಿಂ ॥
ವಿಳಸದ್ದುಗ್ಧಂ ಕಿಡುಗುಂ ।
ಖಳಜನ ಸಂಪರ್ಕದಿಂದೆ ಗುಣಿಗಳ್ ಕಿಡುವರ್ ॥ ೫೫ ॥

ಮರುಳಂ ಭ್ರಮೆಯಿಂ ಭುವನದ ।
ನರರಂ ವಿಭ್ರಾಂತರೆಂದು ಪೇೞ್ವಂ ಚೋರಂ ॥
ಪರರಂ ತಸ್ಕರರೆಂಬಂ ।
ದುರುಳಂ ಪೆಱರಂ ದುರಾತ್ಮರೆಂದೂಹಿಸುವಂ ॥ ೫೬ ॥

ಉದಕಂ ನೆಲದೊಳುದಗ್ರ ।
ಪ್ರದೇಶಮಂ ಪುಗದು ಧರೆಯ ನಿಮ್ನ ಸ್ಥಳದೊಳ್ ॥
ಹುದುಗಿ ಕರಂ ಕೂಡಿರ್ಕುಂ ।
ಮದಮುಖನೊಳ್ ಭಾಗ್ಯಮೊಂದದರ್ಹನಸೇರ್ಗುಂ ॥ ೫೭ ॥

ಧರೆಗುಪಕೃತಿಯಂ ಬಗೆಯುತೆ ।
ಶರದಾವಳಿ ಮೞೆಯ ವರ್ಷಿಕಂ ಫಲ ಸುಮಮಂ ॥
ತರುತತಿ ಲತಾಳಿ ತಳೆಗುಂ ।
ಪರೋಪಕಾರವ ನೆಗೞ್ಚದವನೇಕಿಳೆಯೊಳ್ ॥ ೫೮ ॥

ಎಡೆಗೊಂಡಗ್ನಿ ಜ್ವಾಲೆಗೆ ।
ಸುಡುತಿರ್ದುಂ ಬತ್ತಿಯೞಿವನೆಣಿಸದೆ ಬೆಳಗಂ ॥
ಪೊಡರೊಳ್ ನೀಡುವ ತೆಱದಿಂ ।
ದೊಡಲಾಸೆಯನಿಡದೆ ಸುಗುಣಿ ಪರಹಿತವೆಣಿಪಂ ॥ ೫೯ ॥

ಅಡವಿಯೊಳುದಯಿಪ ಮರ್ದಿನ ।
ಗಿಡುಗಳ್ ಮನುಜರ್ಗೆ ಬರ್ಪ ರೋಗವ ಶಮನಂ ॥
ಬಡಿಸಿಹಿತಂ ಗೆಯ್ವಂದದೆ ।
ಪೊಡವಿಯೊಳನ್ಯರ್ಗೆ ಹಿತವ ಮಾೞ್ಪರ್ ಸುಜನರ್ ॥ ೬೦ ॥

ಪರಮು ಕ್ಷೀರವ ನೀಡುವ |
ಸುರಭಿಯುನೊಲವಿಂದೆ ಕಾವರುತ್ತಮು ಫಲವುಂ ||
ಧರಿಯಿಪ ತರುವಂ ಪೊರೆವರ್ |
ಪರೋಪಕಾರಿಗಳನೆಲ್ಲ ನರರಾದರಿಪರ್ || ೬೧

ಹರಿಣಾಂಕ ದ್ಯುತಿಗುತ್ಪಲ |
ಮುರಲ್ಪುದಂಬುಜಮುಬಿಲ್ಪುದಿನರುಚಿಗಬ್ಜಂ ||
ಬಿರಿವುದು ಕುಮುದಂ ಮುಗಿವುದು |
ಧರಣಿಯೊಳೆಲ್ಲವರನಾರ್ಗಮೊಲಿಸಲಶಕ್ಯಂ || ೬೨ ||

ಶುಕಕುತ್ತಮು ಫಲಸಾರಂ |
ಪಿಕಕ್ಕೆ ಮಾಂದಳಿರ ರಸಮುಳಿಗೆ ಮಿಗೆ ಸವಿವ ಸ ||
ನ್ಮೃಕರಂದಂ ಹಿತಮಕ್ಕುಂ |
ಸಕಲರ್ಗೊಂದೇ ವಿಚಾರಮೊಪ್ಪದು ಧರೆಯೊಳ್ || ೬೩ ||

ಅಪರಿಮಿತಾಯಾಸದೆ ಘನ |
ವಿಪಿನದೊಳಗೆ ಪಲಬರ್ನೈಡಿದಧ್ವಂ ಬಟ್ಟೆಕಂ ||
ಸುಪಥಂ ಪಥಿಕರ್ಗಕ್ಕುಂ |
ವಿಪುಳ ಜನಾಭಿನುತಮಿಳೆಯು ಮೆಚ್ಚುಗೆ ಪಡೆಗುಂ || ೬೪ ||

ನೀರ ಕಣಂಗಳ್ ಕೂಡುತೆ |
ವಾರಿಧಿಯೆನಿಸಿರ್ಕುಮತುಳ ತೃಣ ಸಂದೋಹಂ ||
ಸೇರುತೆ ರಜ್ಜುವೆನಿಕ್ಕುಂ |
ಭೂರಿ ನರರ್ ಬೆರೆದೊಡಧಿಕ ಬಲಯುತರಕ್ಕುಂ || ೬೫ ||

ನರಿವಿಂಡು ಜೇನ್ನೊಣಂಗಳ |
ನೆರವಿಯಿಂ ಜುಂಪೆವಡೆ ಕಾಗೆ ಕೊತ್ತುಟಿ ನಲವಿಂ ||
ಬೆರೆದೆಜಿಕದೊಳಿರ್ಪಂದದೆ |
ನರರನ್ಯೋನ್ಯತೆಯೊಳಿರ್ಪುದುಚಿತಂ ಜಗದೊಳ್ || ೬೬ ||

ಜಲದಾವಳಿಯುಂ ವ್ಯಜನಾ |
ನಿಲಮುಲಿದೋಡಿಸದು ವನವ ದಹಿಸುವ ದಾವಾ ||
ನಲನಂ ಹಿಮಕಣಮುಱಿಸದು |
ಬಲಯುತನಂ ದುರ್ಬಲಂ ವಿರೋಧಿಸಿ ಜಯಿಸಂ || ೧೭ ||

ಕುಕ್ಕುಟವ ಕುಕ್ಕುಟಂಗಳ್ |
ಕುಕ್ಕುರಮಂ ಕುಕ್ಕುರಂಗಳಜಮನಜಂಗಳ್ ||
ಚಿಕ್ಕನೆ ಕಂಡು ಕನಲ್ಗುಂ |
ಮಿಕ್ಕಿನ ಪಂಡಿತನ ಪಂಡಿತರ್ ಕಂಡುರಿವರ್ || ೧೮ ||

ಕರಿ ನಿಕರವ ವೈರದೆ ಸಂ |
ಹರಿಸುವ ಹರಿಯಂತೆ ಸರ್ಪ ಕುಲಮಂ ಪಗೆಯಿಂ ||
ಪರಿಮರ್ದಿಪ ನಕುಲದ ವೋ |
ಲರಿಬಲಮಂ ಕಾದಿ ವೀರನೊರ್ವನೆ ತಱಿಗುಂ || ೧೯ ||

ಉರಿಯುತೆ ಕಿಚ್ಚಿನ ಕಿಱುಗಿಡಿ |
ಯರಣ್ಯಮಂ ಪೆರ್ಚಿ ಚುರ್ಚುಗುಂ ಲವಮಾತ್ರಂ ||
ಗರಳಂ ಜೀವಿಯ ಕೊಲ್ಗುಂ |
ವಿರೋಧಿಯಂ ಕಿಱಿಯನೆಂದುಬಗೆವುದಯೋಗ್ಯಂ || ೨೦ ||

ಫಣಿಯಂ ಮಂತ್ರೌಷಧಿಯಿಂ |
ಮಣಿಯಿಸಿ ಬಂಧಿಪರುರುಳ್ಚಿ ಕುಱಿಯೊಳ್ ವನಪಾ ||
ರಣಮಂ ಕಯ್ಸೆಱೆವಿಡಿವರ್ |
ಗುಣಯುಕ್ತಿಗಳಿಂದೆ ಶಕ್ತರಂ ಗೆಲೆ ಶಕ್ಯಂ || ೨೧ ||

ಕೊಡಲಿಯೊಳುರುತರ ತರುವಂ |
ಕಡಿದುರುಳಿಸಲರಿದೆ? ಚಾಣದಿಂ ಪಾಸಱೆಯಂ ||
ಬಡಿದುವಿಭೇದಿಸಲಾಗದೆ? |
ಕಡುಗಜ್ಜಂಗಳ್ಗೆ ಯುಕ್ತ ಯುಕ್ತಿಯವಶ್ಯಂ || ೨೨ ||

ಜಲಧಿಯೊಳಾಟದೆ ತಳದಿಂ ।
ಸುಲಲಿತ ರತ್ನಾಳಿ ಸಿಗದು ಬಿತ್ತದೆ ಬಿತ್ತಂ ॥
ಪೊಲದೊಳ್ ಬೆಳೆಗೆಯ್ ಬೆಳೆಯದು ।
ಫಲಮುದ್ಯೋಗಮನೊಡರ್ಚಿದೊಡೆ ಕಯ್ಸೇರ್ಗುಂ ॥ ೨೩ ॥

ನಡೆಯಲ್ಕೆಳಸುವ ಪಾಂಥಂ ।
ಪೊಡವಿಯೊಳಡೆತಡೆಯ ನೋಡಿ ಪರಿಭಾವಿಸಿ ಮುಂ ॥
ದಡಿಯಿಡುವಂತೆಚ್ಚಱಿಂ ।
ತೊಡಗುವ ಮೊದಲೆಣಿಸಿ ಕಾರ್ಯಮೆಸಗುವುದುಚಿತಂ ॥೨೪॥

ಕಾಡಿನ ಸಸ್ಯಕೆ ಜಲಮುಲೆ ।
ದಾಡುವ ಮೃಗ ವಿಹಗ ಜಂತು ತತಿಗಾಹಾರಂ ॥
ಬೇಡದೆ ಧರೆಯೊಳ್ ಸಿಗುವುದು ।
ನಾಡ ನರಂ ಪೆಱರ ಮೆಚ್ಚಿಸುತೆ ಜೀವಿಪುದೇ? ॥ ೨೫ ॥

ನಲವಿಂ ಬೆಳೆಯಿಸದೊದವಿದ ।
ಫಲಮಂ ಖಗಮುಣ್ಬ ತೆಱದೆ ಪುಲ್ಲಂ ಪಶುಸಂ ॥
ಕುಲಮುಗಿದು ಮೇವ ಪರಿಯೊಳ್ ।
ಸುಲಭದೆ ಯತ್ನಿಸದೆ ಮನುಜನುಣ್ಬುದುಚಿತಮೇ? ॥ ೨೬ ॥

ಕೃಪಣಂಗೈಶ್ವರ್ಯಂ ದಾ ।
ನಪರಂಗೆ ಬಡತನಮಲ್ಪಮತಿಗತಿ ಮೋದಂ ॥
ನಿಪುಣಂಗತಿಶಯ ಖೇದಂ ।
ವಿಪರೀತ ಕ್ರಮದೆ ಪೊರ್ದುಗುಂ ವಿಧಿ ವಶದೊಳ್ ॥ ೨೭ ॥

ಸೊಂಪಿನ ಪಣ್ಣಿರೆ ಪಕ್ಷಿಯು ।
ಗುಂಪೈತರ್ಪುದು ಮರಕ್ಕೆ ಮಧುವಿರೆ ಭೃಂಗಂ ॥
ಕಂಪಿನ ಪುಷ್ಪಕೆ ಬರ್ಪುದು ।
ಸಂಪದಮಿರ್ಪಾತನೆಡೆಗೆ ಲೋಗರ್ ಸೇರ್ವರ್ ॥ ೨೮ ॥

ಗುಣಹೀನಂ ಭೂತಳದೊ |
ಪಣನಥವಂ ದುಶ್ಚರಿತ್ರನಜ್ಞಂ ದುರ್ಭಾ ||
ಪಣನಘಕರನೆನಿಸಿದೊಡಂ |
ಪಣವೊಂದಿರ್ಪ ನರನಿಳೆಯ ಮನ್ನಣೆ ಪಡೆವಂ || ೭೯ ||

ವಿನಯೋಪೇತಂ ಸುಗುಣಂ |
ಘನ ವಿದ್ಯಾನ್ವಿತನುದಾರನುತ್ತಮ ಚರಿತಂ ||
ಜನಹಿತಕರನಾದೊಡೆಯುಂ |
ಧನಹೀನಂ ಭುವನ ಜನದ ಮನ್ನಣೆ ಪಡೆಯಂ || ೮೦ ||

ಪುಡಿಯುಪ್ಪನಿನಿದುಗಾಣದೆ |
ಕಡೆಗಣಿಪರೆ? ಮಧುರ ರುಚಿಯ ಕಾಣದೆ ನೀರಂ ||
ಕುಡಿಯರೆ? ಧನಿಕರ್ ಧರೆಯೊಳ್ |
ಬಡವಂ ಗೌರವ ವಿಹೀನನೆಂದೆಣಿಸುವುದೇ? || ೮೧ ||

ಕನಕಮೆನಿತ್ತಿರ್ದೊಡಮೇಂ? |
ಘನ ಕಾರ್ಯಂಗೆಯ್ವೊಡಲ್ಪಮೆನಿಸುವ ಕರ್ಬೊನ್ ||
ಮನುಜಂಗವಶ್ಯಮೆನಿಕುಂ |
ಧನಾಢ್ಯರಿಂದಿಳೆಗೆ ಬಡವರತಿ ಹಿತವಂತರ್ || ೮೨ ||

ಪಿಕಪಕ್ಷಿಗೆ ಕಾಕಂ ಜೂ |
ತಕುಜಕೆ ಶಾಲ್ಮಲಿಮಹೀರುಹಂ ಕಮಲಕೆ ಕಿಂ ||
ಶುಕಕುಸುಮಂ ಕರಿಗೆ ಖರಂ |
ಸುಕೀರ್ತಿ ಗುಣವರ್ಧನಂಗೆ ಧನಿಕಂ ದೊರೆಯೇ? || ೮೩ ||

ಶರಧಿಯಿನುದಕವನೊಂದಿದ |
ಶರದಾವಳಿಯಿಂ ಜಿನುಂಗಿ ಬೀಳುತೆ ಮುನ್ನೀರ್ ||
ಪರಿದಂಬುಧಿಯಂ ಸೇರದೆ? |
ಪರರ್ಗೆ ಕೊಟ್ಟಂಗೆ ಬಡತನಂ ಬಾಧಿಪುದೇ? || ೮೪ ||

ನದಿಯೊಳ್ ಭರದಿಂ ಪ್ರವಹಿಸು |
ವುದಕದೊಳುದಯಿಸದು ಪಾಚಿ ಪಲ್ವಲ ಜಲದೊಳ್ ||
ಪುದಿದುಱಿ ಬೆಳೆವುದು ಪಾವಸೆ |
ಯುದಾರಿಯೊಳ್ ಕಪಟವಿರದು ಲೋಭಿಯೊಳಿರ್ಕುಂ ||೮೫||

ಒಲವಿಂದನ್ಯರ್ಗೀಯುದ |
ನೆಲಕಲಸೈಶ್ವರ್ಯಮುಱಿತ ನಿಜ ವಿದ್ಯೆಗಳಂ ||
ಕಲಿಸದ ಗರ್ವಿಯ ನಿಪುಣತೆ |
ತಲೆಯೊಳ್ ದುಷ್ಟಾಹಿ ತಳೆವ ಮಣಿವೊಲ್ ವ್ಯರ್ಥಂ ||೮೬||

ವನಿತೆಗೆ ಪಾತಿವ್ರತ್ಯಂ |
ಮುನಿಗತಿ ವೈರಾಗ್ಯಮಿಱಿವ ಕಲಿಗುರು ಶೌರ್ಯಂ ||
ಘನ ಪಂಡಿತಂಗೆ ವಿನಯಂ |
ಧನಿಕಂಗೌದಾರ್ಯಮಸಮ ಭೂಷಣಮೆನಿಕುಂ ||೮೭||

ಕಾರೊಳ್ ಸೂಸುವ ವರ್ಷಾ |
ಸಾರಂ ತೊಱಿಗೊದವಿ ಬಂದೊಡಂ ಬೇಸಗೆಯೊಳ್ ||
ನೀರಾಱಿ ಕುಂದುವಂದದೆ |
ಸಾರೈಶ್ವರ್ಯಂ ನರಂಗೆ ಸೇದೊರ್ಡಮಿಲ್ಲಾಗುಂ ||೮೮||

ಉಪಯುಕ್ತ ಕಾಲಕಿಲ್ಲದ |
ವಿಪುಳ ತರೈಶ್ವರ್ಯಮೇಕೆ? ಪಸಿವಿನ ಸಮಯ ||
ಕ್ಕುಪಲಭಿಸದನ್ನಮೇತ |
ಕರ್ಪಕೃತಿಯನೆಣಿಸದ ನಂಟರೇಕೆ? ನಿರರ್ಥಂ ||೮೯||

ಜಲಮಿಲ್ಲದ ವಿಸ್ತಾರದ |
ನೆಲೆಗಾಣದ ಕೂಪಮೇಕೆ? ಕೃಷಿಗಾಗದ ಪೆ ||
ರ್ಬೊಲಮೇಕೆ? ಮಹೀತಳದೊಳ್ |
ಕುಲವರ್ಧಕ ಪುತ್ರನಿಲ್ಲದಾಲಯಮೇಕೈ? ||೯೦||

ಕೆಳೆಹಂಸಂ ನಲಿದಾಡುವ ।
ನಳಿನಾಕರಮೆಸೆವ ವತ್ಸ ಮಾಡುವ ಗೋಷ್ಠಂ ॥
ಗಿಳಿ ಸುಳಿದಾಡುವ ನಂದನ ।
ಮೆಳವುಗುವಲೆದಾಡುವಾಲಯಂ ಕಣ್ಗೊಳಿಕುಂ ॥ ೯೧ ॥

ವಿಲಸತ್ಪುಷ್ಪದ ಪರಿನಿ ।
ರ್ಮಲ ಪರಿಮಳಮುಳಿವ ತೆಱದೆ ಪಕ್ವಾಮಲಸ ॥
ತ್ಫಲದ ರುಚಿ ಕುಂದುವಂದದೆ ।
ಬಲಯೌವನಮೊರ್ಮೆ ಜೀವಿಗೊದವಿ ಸಡಿಲ್ಗುಂ ॥ ೯೨ ॥

ಸುರ ಕಾರ್ಮುಕದಂತೆ ಪಯೋ ।
ಧರದಾಕೃತಿಯಂತೆ ಪೊಳೆವ ಸೌದಾಮಿನಿವೊಲ್ ॥
ಪರಿವ ಜಲಬುದ್ಬುದದವೊಲ್ ।
ಧರಣಿಯ ಜೀವಿಗಳ ದೇಹ ರೂಪಮನಿತ್ಯಂ ॥ ೯೩ ॥

ಶರಧಿಯೊಳೊಂದಿದ ಜಲಕು ।
ಬ್ಬರಮಿಳಿತಂ ಪೊರ್ದುವಂತೆ ಶಶಿಗೆ ಕಳಾವಿ ॥
ಸ್ತರಣಂ ಕ್ಷಯಮುಪ್ಪಂದದೆ ।
ನರಂಗೆ ಮೋದಂ ವಿಷಾದಮಾವಿರ್ಭವಿಕುಂ ॥ ೯೪ ॥

ಕರದೊಳ್ ಸಾಲಾಗಿರ್ಪೈ ।
ವೆರಲ್ಗಳೊಳ್ ಗಾತ್ರ ಭೇದಮಿರ್ಪಂತಿರೆವೊಲ್ ॥
ಧರಣಿಯ ಮಾನವ ಕುಲದೊಳ್ ।
ಶರೀರ ರೂಪ ಗುಣ ಭೇದಮಿರ್ಪುದು ಸಹಜಂ ॥ ೯೫ ॥

ನರನೊರ್ವನ ಮಾನಸದೊಳ್ ।
ವರಧಾರ್ಮಿಕ ಬುದ್ಧಿಯನುಚಿತಾಲೋಚನೆಗಳ್ ॥
ಪರಿವರ್ತಿಸಿ ಸಂಜನಿಕುಂ ।
ಧರೆಯ ಜನಕ್ಕೆಂತು ಬುದ್ಧಿ ಸಾಮ್ಯಂ ಬರ್ಕುಂ? ॥ ೯೬ ॥

ಧರಣಿಯೊಳೊಬ್ಬುವ ಸಲಿಲಂ |
ಪರಿಯಿಸಿದೆಡೆಗೈದುವಂತೆ ಪರ್ಬುವ ಲತೆಗಳ್ ||
ತಿರಿಪಿಸಿದೆಡೆಗೊಂದುವವೋಲ್ |
ನರನಸ್ಥಿರ ಚಿತ್ತಮಟ್ಟಿದತ್ತಮೆ ಸಾರ್ಗುಂ || ೯೭ ||

ಉನ್ನತ ಶೌರ್ಯದೊಳನ್ಯರ |
ಬನ್ನಂಬಡಿಸುತ್ತೆ ಜಯಿಸಿ ಸೊರ್ಕಿದ ನರನಂ ||
ಮನ್ನಿಸಿ ಕಲಿಯೆನಲಾಗದು |
ತನ್ನಸ್ಥಿರಮನವ ಗೆಲ್ದ ಮನುಜನೆ ಧೀರಂ || ೯೮ ||

ಪರರೊಳ್ ದೋಷಮನೆಣಿಸುತ |
ಪರಿಪಂಥಿಗಳೆಂದು ಬಱದೆ ಬಗೆವುದಯುಕ್ತಂ ||
ನರನಂ ಮಱಿಯಿಂ ಕಿಡಿಸುವ |
ವಿರೋಧಿವರ್ಗಂ ನಿಜೇಂದ್ರಿಯಂಗಳೆ ಸಿದ್ಧಂ || ೯೯ ||

ಶರನಿಧಿಯಿಂ ಗಾಂಭೀರ್ಯವ |
ಗಿರಿಯಿಂ ಸ್ಥೈರ್ಯವ ದಿನೇಶನಿಂ ಸಾಹಸಮಂ ||
ಧರೆಯಿಂ ಸಹನೆಯನಱಿಯುತೆ |
ನರನತಿ ಗುಣವಂತನೆನಿಸಿ ಬಾಳ್ವುದು ವಿಹಿತಂ || ೧೦೦ ||

ಧರ್ಮವ ಮೀಱದೆ ಮತ್ಸರ |
ದುರ್ಮದ ಖತಿ ಕಾಮ ಮೋಹ ಲೋಭವುೞಿದು ಸ ||
ತ್ಕರ್ಮಮನೆಸಗುತೆ ಜೀವಿಪ |
ನಿರ್ಮಲ ಚಾರಿತ್ರನಿಳೆಯೊಳುತ್ತಮನೆನಿಪಂ || ೧೦೧ ||

ಮಾನಾಪಮಾನಮಂ ಮಹ |
ದಾನಂದ ವಿಷಾದಮಂ ಸುಲಾಭ ವ್ಯಯಮಂ ||
ಜ್ಞಾನದೆ ಸಮಮೆಂದೆಣಿಸುವ |
ಮಾನವನಿಳೆಯೊಳ್ ವಿವೇಕಮತಿಯೆಂದೆನಿಪಂ || ೧೦೨ ||

ಮನದೊಳ್ ವಿರಕ್ತಿ ತಾಳುತೆ ।
ತನುವಂ ದಂಡಿಸುತೆ ತಪಮನೆಸಗುವ ಯತಿಯಿಂ ॥
ಜನಹಿತಕಾರ್ಯಂಗೆಯ್ಯುತೆ ।
ಮನೆಯೊಳೆ ಜೀವಿಪ ಗೃಹಸ್ಥನಧಿಕನೆನಿಪ್ಪಂ ॥ ೧೦೩ ॥

ಗುರುಜನವ ಮನ್ನಿಸುತೆ ನಿಜ ।
ತರುಣಿಯ ತನುಭವರ ರಕ್ಷಿಸುತೆ ಸುಜನರ ಸ ॥
ತ್ಕರಿಸುತೆ ಪರಹಿತಮೆಸಗುತೆ ।
ವರ ಧರ್ಮವ ಬಿಡದೆ ಬಾಳ್ವ ಪುರುಷಂ ಶ್ರೇಷ್ಠಂ ॥ ೧೦೪ ॥

ಪತಿಯಂ ಸೇವಿಸುತನಿಶಂ ।
ಹಿತದಿಂ ಪಿರಿಯರ ಸಮರ್ಚಿಸುತ್ತತಿ ನಯದಿಂ ॥
ಸುತರಂ ಸಲಹುತೆ ಜೀವಿಪ ।
ಸತಿ ವಸುಮತಿಯೊಳ್ ಪತಿವ್ರತಾಮಣಿ ಸಿದ್ಧಂ ॥ ೧೦೫ ॥

ಜನನೀಜನಕರ ನಿಜಗುರು ।
ಜನಮಂ ಸೇವಿಸುತೆ ಯೋಗ್ಯ ಗುರುವಿಂ ವಿದ್ಯಾ॥
ರ್ಜನೆಯಂ ಪಡೆಯುತೆ ವರ್ಧಿಪ ।
ವಿನಯಾನ್ವಿತನಪ್ಪನಂದನಂ ಕುಲದೀಪಂ ॥ ೧೦೬ ॥

ಒಡೆಯನ ನುಡಿಯ ನಿರೂಪವ ।
ಕಡೆಗಣಿಸದೆ ಕಪಟವೆಸಗದಹಿತೋಕ್ತಿಗಳಂ ॥
ನುಡಿಯದೆ ಕುಹಕವ ತೋಱದೆ ।
ನಡವಳಿಯಂ ಮೀಱದಿರ್ಪ ಸೇವಕನಧಿಕಂ ॥ ೧೦೭ ॥

ನರ ಕುಲವೊಂದೆಂದೆಣಿಸುತೆ ।
ಪರಿಭೇದವ ತೊಱೆದು ನೀತಿ ಕೆಡಿಸದೆ ಹಿತದೊಳ್ ॥
ನಿರತಂ ಮೈತ್ರಿಯೊಳಿರ್ದೊಡೆ ।
ಧರೆಯೊಳ್ ಮನುಜರ್ಗೆ ಶಾಂತಿ ಸುಖಮುದ್ಭವಿಕುಂ ॥೧೦೮॥

* * *

ಖ್ಯಾತ ಕರಾಯ ನಿವಾಸಂ ।
ಭೂತಳ ಸುಮನಸನನಂತ ಕೆದಿಲಾಯನ ಸಂ ॥
ಜಾತಂ ಲಕ್ಷ್ಮೀತನುಜಂ ।
ಸೀತಾರಾಮಾಖ್ಯನೊರೆದನೀ ಸೂಕ್ತಿಗಳಂ ॥ ೧ ॥

ಧರಣಿಗೆ ಸಮುಚಿತ ಕಾಲದೆ ।
ಶರದಂ ಮುೞಿಗೞಿಗೆ ಸಸ್ಯತತಿ ಬೆಳೆಗಿಳೆಯೊಳ್ ॥
ಪರಿವರ್ಧಿಕೆ ಗೋವೃಂದಂ ।
ನರರಿರ್ಕತಿ ಸುಖದೊಳಕ್ಕೆ ಮಂಗಳಮೆಂದುಂ ॥ ೨ ॥

ಕಠಿಣ ಶಬ್ದಾರ್ಥ

ಅಲಂಕಾರ = ಕಾವ್ಯಗಳ ಅಲಂಕಾರ, ವಿಭೂಷಣ
ಆತ್ಮಘೋಷ = ಕಾಗೆ
ಇಕ್ಷು = ಕಬ್ಬು
ಇಂಗೋಲ್ = ಕಬ್ಬು
ಉಕ್ಕಂದ = ಸಮೃದ್ಧಿ
ಒಕ್ಕು = ಪ್ರವಹಿಸು
ಕಜ್ಜಳ = ಕಾಡಿಗೆ
ಕರಟ = ಕಾಗೆ
ಕರಂಡಕ = ಕರಡಿಗೆ
ಕರ್ಬೊನ್ = ಕಬ್ಬಿಣ
ಕಳಕಂಠ = ಕೋಗಿಲೆ
ಕಿಂಶುಕ = ಮುತ್ತುಗ
ಕೀರ = ಗಿಳಿ
ಕುಕ್ಕುರ = ನಾಯಿ
ಕುಂದಣ = ಚಿನ್ನ
ಕೆರಸೆ = ಗೆರಸೆ
ಕೊತ್ತಟಿ = ಕಾಗೆಗಳ ಗುಂಪು
ಖರ = ಕತ್ತೆ
ಗಹನ = ಕಾಡು
ಗುಣ = ಕಾವ್ಯದ ಗುಣ, ಶೀಲ
ಗೋಷ್ಠ = ಹಟ್ಟಿ
ಚಾದಗೆ = ಚಾತಕ ಪಕ್ಷಿ
ಚುರ್ಚು = ಸುಡು
ಜ್ವಳನ = ಅಗ್ನಿ
ತರಂಗಿಣಿ = ನದಿ
ತಾರಾಧೀಶ್ವರ = ಚಂದ್ರ
ತುಹಿನಕರ = ಚಂದ್ರ
ದ್ರುಮ = ಮರ
ನಕುಲ = ಮುಂಗುಸಿ
ನವನೀತ = ಬೆಣ್ಣೆ
ನೆಲಕಲ = ಲೋಭಿ
ಪದ = ವಿಭಕ್ತಿ ಕೂಡಿದ ಶಬ್ದ; ಚರಣ
ಪಯೋಧರ = ಮುಗಿಲು
ಪರಪುಷ್ಟ = ಕೋಗಿಲೆ
ಪರಿಪಂಥಿ = ವೈರಿ
ಪಂಕ = ಕೆಸರು
ಪಾದಪ = ಮರ
ಪಿಕ = ಕೋಗಿಲೆ
ಬಲಿಪುಷ್ಟ = ಕಾಗೆ
ಭಾರತಿ = ಮಾತು, ಸರಸ್ವತೀದೇವಿ
ಮರಾಳ = ಹಂಸ
ಮಕ್ಷಿಕ = ನೊಣ
ಮಲಯಜ = ಶ್ರೀಗಂಧ
ಮಿಹಿರ = ಸೂರ್ಯ
ಮೃಗನಾಭಿ = ಕಸ್ತೂರಿ

ಮೃಗಮದ = ಕಸ್ತೂರಿ
ರಸಾಲ = ಕಬ್ಬು
ಲಕ್ಷಣ = ಕಾವ್ಯದ ಲಕ್ಷಣ, ಶರೀರದ ಲಕ್ಷಣ
ವತ್ಸ = ದನದ ಕರು
ವರ್ಣ = ಅಕ್ಷರ, ಬಣ್ಣ
ವಂಶ = ಬಿದಿರು
ವೃಷ್ಟಿ = ಮಳೆ
ವ್ಯಜನ = ಬೀಸಣಿಗೆ
ಶತಪತ್ರ = ತಾವರೆ
ಶರದ = ಮುಗಿಲು
ಶರ್ವರಿ = ರಾತ್ರಿ
ಶಾಲ್ಮಲಿ = ಬೂರುಗದ ಮರ
ಸುರಕಾರ್ಮುಕ = ಮಳೆಬಿಲ್ಲು
ಸಿತಕರ = ಚಂದ್ರ
ಸಿರಿಕಂಡ = ಶ್ರೀಗಂಧ
ಸೌದಾಮಿನಿ = ಮಿಂಚು
ಸೌರಭ = ಪರಿಮಳ
ಸೌಷವ = ಪರಿಮಳ
ಹರಿಣಾಂಕ = ಚಂದ್ರ

ವಿ. ಸೂ :- ಹಳಗನ್ನಡದಲ್ಲಿ ಬಳಕೆಯಲ್ಲಿದ್ದ "ಱ"ವನ್ನು "ರ"ವೆಂದೂ "ೞ"ವನ್ನು "ಳ"ವೆಂದೂ ಈಗ ಹೇಳುವ ರೂಢಿಯಾಗಿದೆ.

ಇದೇ ಲೇಖಕನ ಇತರ ಕೃತಿಗಳು

ಯಕ್ಷಗಾನ ಛಂದಸ್ಸು	೧ ೦೦
ಯಕ್ಷಗಾನ ದುರ್ಯೋಧನ ವಧೆ	೦ ೮೦

ಪುಸ್ತಕ ದೊರೆಯುವ ಸ್ಥಳಗಳು

† ಕ ಪು. ಸೀತಾರಾಮ ಕೆದಿಲಾಯ
ಶಿಶಿಲ. (ಬೆಳ್ತಂಗಡಿ ತಾಲೂಕು)

† ಕ. ಪು. ಲಕ್ಷ್ಮೀನಾರಾಯಣ ಕೆದಿಲಾಯ
ಕರಾಯ. (ಬೆಳ್ತಂಗಡಿ ತಾಲೂಕು)

† ದಿ ಪೊಪ್ಯುಲರ್ ನ್ಯೂಸ್ ಏಜೆನ್ಸಿ
ಪುತ್ತೂರು.

† ಯಂ. ವೆಂಕಟ್ರಾವ್ ಏಂಡ್ ಸನ್ಸ್
ಮಂಗಳೂರು.

† ಸಾವಂಜೆ ಗುರುರಾವ್ ಏಂಡ್ ಸನ್ಸ್
ಉಡುಪಿ

ಮುದ್ರಣ: ಆದರ್ಶ ಪ್ರೆಸ್, ಪುತ್ತೂರು.